# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 218 (192) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 10.12.2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳನ್ನು ನೂತನವಾಗಿ ಪ್ರಾರಂಭಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಯಾವ ರೀತಿಯ ಪ್ರೋತ್ಸಾಹಕ ಯೋಜನೆಗಳಿವೆ; (ವಿವರ ನೀಡುವುದು) | ರಾಜ್ಯದಲ್ಲಿ ನೂತನವಾಗಿ ಪ್ರಾರಂಭಿಸಲು ಹಾಗೂ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಭೂಮಿ ಖರೀದಿ ಪ್ರಕ್ರಿಯೆ ಸರಳೀಕರಣಗೊಳಿಸಲಾಗಿದೆ.<br>• ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಕೆಲವು ಮುಖ್ಯ ಎನ್.ಒ.ಸಿ/ಒಪ್ಪಿಗೆಗಳನ್ನು ಸ್ವಯಂ ಘೋಷಣಾ ಪತ್ರದ ಆಧಾರದ ಮೇಲೆ ಪಡೆಯಲು ಮತ್ತು 3 ವರ್ಷಗಳವರೆಗೆ ಸಮಯವನ್ನು ವಿಸ್ತರಿಸಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002ಕ್ಕೆ ತಿದ್ದುಪಡಿ ತರಲಾಗಿದೆ.<br>• ಕೈಗಾರಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕಾರ್ಮಿಕ ಕಾನೂನನ್ನು ಸರಳೀಕರಣಗೊಳಿಸಲಾಗಿದೆ.<br>• ದೇಶ ವಿದೇಶಗಳ ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಲು ಸರಣಿ ಸಭೆಗಳನ್ನು ನಡೆಸಲಾಗುತ್ತಿದೆ.<br>• ಕೈಗಾರಿಕೆಗಳನ್ನು ಶೀಘ್ರವಾಗಿ ಅಡತಡೆಗಳಿಲ್ಲದೆ, ಪ್ರಾರಂಭಿಸಲು ಈಸ್ ಆಫ್ ಡೂಯಿಂಗ್ ಬಿಸಿನೆಸ್ ಜಾರಿಗೊಳಿಸಲಾಗಿದೆ.<br>• ರಾಜ್ಯಕ್ಕೆ ವಿದೇಶಿ ಹೂಡಿಕೆಗಳನ್ನು ಆಕರ್ಷಿಸಲು ಬೆಂಗಳೂರಿನಲ್ಲಿ ದಿನಾಂಕ 12 ರಿಂದ 14ನೇ ಫೆಬ್ರವರಿ 2025ರವರೆಗೆ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ (ಇನ್ವೆಸ್ಟ್ ಕರ್ನಾಟಕ-2025)ನ್ನು ಆಯೋಜಿಸಲಾಗಿದೆ ಹಾಗೂ ದಿನಾಂಕ 10 ರಿಂದ 14ನೇ ಫೆಬ್ರವರಿ 2025ರವರೆಗೆ ಬೆಂಗಳೂರಿನಲ್ಲಿರುವ ಯಲಹಂಕ ವಾಯು ನೆಲೆಯಲ್ಲಿ ಆಯೋಜಿಸಿರುವ ಏರೋ ಇಂಡಿಯಾ-2025ರಲ್ಲಿಯೂ ಸಹ ಭಾಗವಹಿಸಲಾಗುತ್ತಿದೆ. |
| ಆ | ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಪ್ರಾರಂಭವಾಗಿರುವ ನೂತನ ಖಾಸಗಿ ಹಾಗೂ ಸರ್ಕಾರಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ (2021-22 ರಿಂದ) 2024ನೇ ಸಾಲಿನ ನವಂಬರ್ ಅಂತ್ಯದವರೆಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (SHLCC) ಹಾಗೂ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ (SLSWCC) ಸಭೆಗಳಲ್ಲಿ ಒಟ್ಟು 2016 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ರೂ.4,68,343.48 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, ಒಟ್ಟು 6,68,455 ಜನರಿಗೆ ಉದ್ಯೋಗ ಸೃಜನೆಯಾಗಲಿದೆ.<br><br>ಈ ಪೈಕಿ 115 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ಒಟ್ಟು ರೂ.72,683.30 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, 1,17,811 ಜನರಿಗೆ ಉದ್ಯೋಗ ಸೃಜನೆಯಾಗಿದೆ. ಉಳಿದ ಯೋಜನೆಗಳು ವಿವಿಧ ಅನುಷ್ಠಾನದ ಹಂತದಲ್ಲಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |

| | | |
|---|---|---|
| ಇ | ಕಳೆದ ಮೂರು ವರ್ಷಗಳಲ್ಲಿ ಸದರಿ ಕೈಗಾರಿಕೆಗಳಿಂದ ಎಷ್ಟು ಮೊತ್ತದ ಹಣ ಹೂಡಿಕೆಯಾಗಿದೆ; (ವಿವರ ನೀಡುವುದು) | ಅನುಮೋದನೆಯಾದ ಒಟ್ಟು 2016 ಯೋಜನೆಗಳ ಪೈಕಿ 115 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ ಒಟ್ಟು ರೂ.72,683.30 ಕೋಟಿ ಬಂಡವಾಳ ಹೂಡಿಕೆಯಾಗಿದೆ. |
| ಈ | ನೂತನ ಕೈಗಾರಿಕೆಗಳ ಸ್ಥಾಪನೆಯಿಂದ ಸೃಷ್ಟಿಯಾಗಿರುವ ಉದ್ಯೋಗದ ಪ್ರಮಾಣ ಎಷ್ಟು? (ವಿವರ ನೀಡುವುದು) | ಅನುಮೋದನೆಯಾದ ಒಟ್ಟು 2016 ಯೋಜನೆಗಳ ಪೈಕಿ 115 ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಿಂದ 1,17,811 ಜನರಿಗೆ ಉದ್ಯೋಗ ಸೃಜನೆಯಾಗಿದೆ. |

ಸಿಐ 361 ಎಸ್‌ಪಿಐ 2024

(ಎಂ.ಬಿ.ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನುಬಂಧ

LCQ 218(192)

## Details of SHLCC Approved Projects -2021-22 to November - 2024

| Year | Total Approved Projects | | | Implemented | | | Under Implemented | | | Dropped | | |
|---|---|---|---|---|---|---|---|---|---|---|---|---|
| | No of Projects | Investment | Employment | No of Projects | Investment | Employment | No of Projects | Investment | Employment | No of Projects | Investment | Employment |
| 2021-22 | 16 | 20120.28 | 8782 | 8 | 7548.77 | 2392 | 7 | 10571.51 | 6230 | 1 | 2000 | 160 |
| 2022-23 | 56 | 295661.82 | 220499 | 21 | 41154.95 | 74436 | 34 | 254002.9 | 144763 | 1 | 504 | 1300 |
| 2023-24 | 29 | 52950.49 | 40375 | 5 | 15879.57 | 600 | 24 | 37070.92 | 39775 | 0 | 0 | 0 |
| 2024-25 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| Total | 101 | 368732.59 | 269656 | 34 | 64583.29 | 77428 | 65 | 301645.3 | 190768 | 2 | 2504 | 1460 |

## Details of SLSWCC Approved Projects -2021-22 to November - 2024

| Year | Total Approved Projects | | | Implemented | | | Under Implemented | | | Dropped | | |
|---|---|---|---|---|---|---|---|---|---|---|---|---|
| | No of Projects | Investment | Employment | No of Projects | Investment | Employment | No of Projects | Investment | Employment | No of Projects | Investment | Employment |
| 2021-22 | 594 | 25408.83 | 124919 | 48 | 3681.77 | 24698 | 528 | 20874.61 | 97262 | 18 | 852.45 | 2959 |
| 2022-23 | 549 | 29053.88 | 123884 | 30 | 3826.81 | 15380 | 514 | 25142.56 | 107890 | 5 | 84.51 | 614 |
| 2023-24 | 562 | 31281.38 | 116614 | 3 | 591.43 | 305 | 557 | 30601.4 | 116054 | 2 | 88.55 | 255 |
| 2024-25 | 210 | 13866.8 | 33382 | 0 | 0 | 0 | 210 | 13866.8 | 33382 | 0 | 0 | 0 |
| Total | 1915 | 99610.89 | 398799 | 81 | 8100.01 | 40383 | 1809 | 90485.37 | 354588 | 25 | 1025.51 | 3828 |